## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 949

ಸದಸ್ಯರ ಹೆಸರು : ಶ್ರೀ ಹೆಚ್. ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 17.12.2024

ಉತ್ತರಿಸುವವರು : ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತದಲ್ಲಿ ದಿನಾಂಕ 15.03.2024 ಸಂಖ್ಯೆ 16.03.2024 ರಂದು ಸ್ಥಳೀಯ ವೃಂದ ಮತ್ತು ಸ್ಥಳೀಯೇತರ ವೃಂದ ನೇಮಕಾತಿಗಾಗಿ ಅರ್ಜಿ ಕರೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹಟ್ಟಿ ಚಿನ್ನದ ಗಣಿ ಕಂಪನಿಯಲ್ಲಿ ದಿನಾಂಕ 15.03.2024 ಮತ್ತು 16.03.2024 ರಂದು ಸ್ಥಳೀಯ ಮತ್ತು ಸ್ಥಳಿಯೇತರ ವೃಂದದಲ್ಲಿನ ಹುದ್ದೆಗಳ ನೇಮಕಾತಿಗಾಗಿ ಅರ್ಜಿಗಳನ್ನು ಕರೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆ. |
| ಆ) | ಬಂದಿದಲ್ಲಿ, ನೇಮಕಾತಿ ಯಾವುದೇ ಪ್ರಕ್ರಿಯೇ ನಡೆಯದಿರಲು ಕಾರಣವೇನು; | ಹಟ್ಟಿ ಚಿನ್ನದ ಗಣಿ ಕಂಪನಿಯ ಸಿಬ್ಬಂದಿ ಮತ್ತು ಕಾರ್ಮಿಕರ ವೃಂದ ಮತ್ತು ನೇಮಕಾತಿಯ ಸಮಗ್ರ ಪರಿಷ್ಕರಣೆ ಕುರಿತು ಪರಿಶೀಲಿಸಲಾಗುತ್ತಿದ್ದು,ಆರ್ಥಿಕ ಇಲಾಖೆಯ ಅಭಿಪ್ರಾಯ ದನ್ವಯ ಸರ್ಕಾರದ ಆದೇಶ ಸಂ: ಸಿಐ 67 ಸಿಎಂಸಿ 2022 ದಿನಾಂಕ 10.10.2023 ರಂದು ಹಟ್ಟಿ ಚಿನ್ನದ ಗಣಿ ಸಂಸ್ಥೆಯ G5 ಮತ್ತು G8 ದರ್ಜೆಯಲ್ಲಿನ ಒಟ್ಟು 157 ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಕಾರ್ಯಕಾರಿ ಆದೇಶ ಹೊರಡಿಸಲಾಗಿರುತ್ತದೆ. ವ್ಯವಸ್ಥಾಪಕ ನಿರ್ದೇಶಕರು, ಹಟ್ಟಿ ಚಿನ್ನದ ಗಣಿ ಕಂಪನಿ ಇವರ ದಿನಾಂಕ 17.02.2024 ಪತ್ರದಲ್ಲಿ ದಿನಾಂಕ:10-10-2023ರ ಕಾರ್ಯಕಾರಿ ಆದೇಶದಲ್ಲಿನ ಕೆಲವು ಹುದ್ದೆಗಳಿಗೆ ಕನಿಷ್ಠ ವಿದ್ಯಾರ್ಹತೆ ಮತ್ತು ಆಯ್ಕೆ ವಿಧಾನದಲ್ಲಿ ಪರಿಷ್ಕರಣೆ ಅಗತ್ಯವಿದ್ದುದರಿಂದ ತಿದ್ದುಪಡಿ ಆದೇಶ ಹೊರಡಿಸುವಂತೆ ಕೋರಿರುವುದರಿಂದ ಹಾಗೂ ಕೆಲವು ವಿಭಾಗಗಳಲ್ಲಿ ಮಹಿಳಾ ಮತ್ತು ಅಂಗವಿಕಲ ಅಭ್ಯರ್ಥಿಗಳಿಂದ ವಿನಾಯಿತಿ ಕೋರಿರುವುದರಿಂದ ಈ ಕುರಿತು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಭಿಪ್ರಾಯ ಕೋರಲಾಗಿದ್ದು, ಪ್ರಸ್ತುತ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಭಿಪ್ರಾಯ ನಿರೀಕ್ಷಣೆಯಲ್ಲಿದೆ. ಇಲಾಖೆಯಿಂದ ಅಭಿಪ್ರಾಯ ಸ್ವೀಕೃತಗೊಂಡ ನಂತರ ಅದರಂತೆ ಮುಂದಿನ ಅಗತ್ಯ ಕ್ರಮ ವಹಿಸಲಾಗುವುದು. |
| ಇ) | ನೇಮಕಾತಿ ಪ್ರಕ್ರಿಯೇ ವಿಳಂಬ ಮಾಡಿ ಅಭ್ಯರ್ಥಿಗಳ ಭವಿಷ್ಯದಲ್ಲಿ ಹಟ್ಟಿ ಚಿನ್ನದ ಗಣಿ ಕಂಪನಿ ಆಟವಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯ; ಬಂದಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು; | |
| ಈ) | ನೇಮಕಾತಿ ಪ್ರಕ್ರಿಯೇ ಚಾಲನೆ ನೀಡಿ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ಪತ್ರ ನೀಡುವುದು ಯಾವಾಗ? (ವಿವರ ನೀಡುವುದು) | |

ಸಂಖ್ಯೆ: ಸಿಐ 114 ಸಿಎಂಸಿ 2024

(ಎಸ್.ಎಸ್. ಮಲ್ಲಿಕಾರ್ಜುನ್)
ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು